**ವಿಶೇಷ ಸೂಚನೆ:** ವಿಶ್ವವಿದ್ಯಾನಿಲಯದ ಪರೀಕ್ಷಾ ಪ್ರಕಟಣೆಗಳು/ಇತರೆ ಆದೇಶಗಳು ಪ್ರಸ್ತುತ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳ ಷರತ್ತಿಗೊಳ ಪಟ್ಟಿರುತ್ತದೆ.

# ದಾವಣಗೆರೆ ವಿಶ್ವವಿದ್ಯಾನಿಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ, ಶಿವಗಂಗೋತ್ರಿ, ದಾವಣಗೆರೆ-577002
ದೂ.ಸಂಖ್ಯೆ: 08192-208420,208104

ಸಂಖ್ಯೆ:ದಾವಿ:ಪವಿ:2020-21: 197 ದಿನಾಂಕ:19-05-2020

## :: ತಾತ್ಕಾಲಿಕ ಪರೀಕ್ಷಾ ಪ್ರಕಟಣೆ::

ವಿಷಯ: ಜುಲೈ/ಆಗಸ್ಟ್-2020ರಲ್ಲಿ ನಡೆಯುವ ವಿವಿಧ ಸ್ನಾತಕೋತ್ತರ ಪದವಿಯ ಪರೀಕ್ಷೆಗಳಿಗೆ ಅರ್ಜಿಯೊಂದಿಗೆ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಮೌಖಿಕ ಆದೇಶದ ದಿನಾಂಕ:18/05/2020

* * * * *

ವಿಶ್ವವಿದ್ಯಾನಿಲಯದ ಜುಲೈ/ಆಗಸ್ಟ್-2020ರಲ್ಲಿ ನಡೆಯುವ ಸ್ನಾತಕೋತ್ತರ ಪದವಿಯ ದ್ವಿತೀಯ ಮತ್ತು ಚತುರ್ಥ ಪರೀಕ್ಷೆಗಳು ನಡೆಯುವ ಹಿನ್ನಲೆಯಲ್ಲಿ ಪರೀಕ್ಷಾ ಶುಲ್ಕವನ್ನು ನಿಗದಿಪಡಿಸಲಾಗಿದೆ. ಸದರಿ ಶುಲ್ಕವನ್ನು ಈ ಹಿಂದಿನಂತೆಯೇ ಡಿಜಿಟಲ್ ಮಾಧ್ಯಮದ ಮೂಲಕ ಸಂದಾಯ ಮಾಡುವುದು ಕಡ್ಡಾಯವಾಗಿದೆ. ಲಿಖಿತ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ ಕಳುಹಿಸಲಾಗುವುದು.

ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವ ಅಭ್ಯರ್ಥಿಗಳು ಪರೀಕ್ಷಾ ಅರ್ಜಿಯನ್ನು ಮತ್ತು ಶುಲ್ಕದ ವಿವರವನ್ನು ಸಂಬಂಧಿಸಿದ ಆಯಾ ವಿಭಾಗಗಳ ಮುಖ್ಯಸ್ಥರು/ನಿರ್ದೇಶಕರು/ಸಂಯೋಜನಾಧಿಕಾರಿಗಳು/ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವರು(ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ. ಈ ಕಛೇರಿಯಿಂದ ಮುಂದೆ ಕಳುಹಿಸಲಾಗುವ ವೇಳಾಪಟ್ಟಿಯಲ್ಲಿ ನ್ಯೂನ್ಯತೆಗಳಿದ್ದಲ್ಲಿ ಪ್ರಕಟಣೆಯಾದ 03 ದಿನದೊಳಗೆ ಮಾಹಿತಿ ನೀಡುವುದು.

ಸ್ನಾತಕೋತ್ತರ ಅಭ್ಯರ್ಥಿಗಳಿಗೆ ಆಯಾ ಅಧ್ಯಯನ ವಿಭಾಗಗಳನ್ನು ಪರೀಕ್ಷಾ ಕೇಂದ್ರಗಳನ್ನಾಗಿ ನಿಗಧಿಪಡಿಸಲಾಗಿದೆ. ಪರೀಕ್ಷಾ ಕಾರ್ಯಕ್ಕೆ **ಆಯಾ ವಿಭಾಗಗಳ ಮುಖ್ಯಸ್ಥರು/ಪ್ರಾಂಶುಪಾಲರುಗಳನ್ನು ಪರೀಕ್ಷಾ ಮುಖ್ಯ ಅಧೀಕ್ಷಕರನ್ನಾಗಿ ನೇಮಿಸಲಾಗಿದೆ.**

### ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ದಿನಾಂಕ

01. ದಂಡ ಶುಲ್ಕ ರಹಿತ : 20-05-2020 ರಿಂದ 30-05-2020 ರವರೆಗೆ
02. ರೂ.120/-ದಂಡ ಶುಲ್ಕ ಸಹಿತ : 01-06-2020 ರಿಂದ 03-06-2020 ರವರೆಗೆ
03. ರೂ.600/-ದಂಡ ಶುಲ್ಕ ಸಹಿತ : 04-06-2020 ರಿಂದ 05-06-2020 ರವರೆಗೆ

### ಸ್ನಾತಕೋತ್ತರ ಸೆಮಿಸ್ಟರ್ ಸ್ಕೀಂ ಪರೀಕ್ಷೆಗಳು

### ವೃತ್ತಿಪರಕೋರ್ಸ್‌ಗಳಿಗೆ ಮಾತ್ರ (Chemistry/ M.Ed/ M.P.Ed/ M.B.A)

| ಕ್ರಮ ಸಂಖ್ಯೆ | ವಿವರ | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು |
|---|---|---|---|---|
| 01 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ (ಪ್ರತ್ಯೇಕವಾಗಿ) | ರೂ.1740/- | ರೂ.165/- | ರೂ.1905/- |
| 02 | ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಥಿಯರಿ) | ರೂ.340/- | ---- | ರೂ.340/- |
| 03 | ಸೆಮಿಸ್ಟರ್ ಒಂದು ಪ್ರಾಕ್ಟಿಕಲ್ ಪರೀಕ್ಷೆಗೆ | ರೂ.340/- | ---- | ರೂ.340/- |

### ಸ್ನಾತಕೋತ್ತರ ಸೆಮಿಸ್ಟರ್ ಸ್ಕೀಂನ ಪರೀಕ್ಷೆಗಳು

### ವೃತ್ತಿಪರವಲ್ಲದ ಕೋರ್ಸ್‌ಗಳಿಗೆ ಮಾತ್ರ

| ಕ್ರಮ ಸಂಖ್ಯೆ | ವಿವರಗಳು | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು |
|---|---|---|---|---|
| 01 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ (ಪ್ರತ್ಯೇಕವಾಗಿ) | ರೂ.1540/- | ರೂ.165/- | ರೂ.1705/ |
| 02 | ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಥಿಯರಿ) | ರೂ.340/- | ---- | ರೂ.340/- |
| 03 | ಸೆಮಿಸ್ಟರ್ ಒಂದು ಪ್ರಾಕ್ಟಿಕಲ್ ಪರೀಕ್ಷೆಗೆ | ರೂ.340/- | ---- | ರೂ.340/- |

| | | | | |
|---|---|---|---|---|
| **P.G Diploma in Rural Governance, Technology & Sustainable Development** | | | | |
| 01 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ (ಪ್ರತ್ಯೇಕವಾಗಿ) | ರೂ.1540/- | ರೂ.165/- | ರೂ.1705/ |
| 02 | ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಥಿಯರಿ) | ರೂ.340/- | ರೂ.165/- | ರೂ.505/- |
| ಚತುರ್ಥ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಅಥವಾ ವ್ಯಾಸಂಗ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ಬೆಸ ಸೆಮಿಸ್ಟರ್‌ನಲ್ಲಿ ಅನುತ್ತೀರ್ಣಗೊಂಡ ವಿಷಯಗಳ ಪರೀಕ್ಷೆ ತೆಗೆದುಕೊಳ್ಳಲು ನಿಗದಿಪಡಿಸಿರುವ ವಿಶೇಷ ಶುಲ್ಕ. | | ವಿಶೇಷ ಶುಲ್ಕ | | |
| | | ಪ್ರತಿ ಸೆಮಿಸ್ಟರ್ | ಪ್ರತಿ ಪತ್ರಿಕೆಯ ಶುಲ್ಕ | |
| | | ರೂ.1165/- | ರೂ.292/- | |
| **ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ)** | | ಸಾಮಾನ್ಯ | ಪ.ಜಾ/ಪ.ಪಂ/ಪ್ರವರ್ಗ-1(ರೂ) | |
| | | ರೂ.100/- | ರೂ.100/- | |
| **Double the Duration** | | | | |
| 2014-2015ರಲ್ಲಿ ಪ್ರವೇಶ ಪಡೆದು ದ್ವಿಗುಣ ಅವಧಿ ಪೂರೈಸಿದ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ವಿಶೇಷ ಶುಲ್ಕ | | ಪ್ರತಿ ಸೆಮಿಸ್ಟರ್ | ಪ್ರತಿ ಪತ್ರಿಕೆಯ ಶುಲ್ಕ | |
| | | ರೂ.2000/- | ರೂ.340/- | |
| **Challenging Valuation (ಸವಾಲಿನ ಮೌಲ್ಯಮಾಪನ)** | | | | |
| ಸವಾಲಿನ ಮೌಲ್ಯಮಾಪನಕ್ಕೆ ನಿಗದಿಪಡಿಸಿರುವ ಶುಲ್ಕ (ಫಲಿತಾಂಶ ಪ್ರಕಟಗೊಂಡ 10 ದಿನದೊಳಗಾಗಿ ಅರ್ಜಿ ಸಲ್ಲಿಸಬೇಕು) | | ಪ್ರತಿ ಪತ್ರಿಕೆಗೆ ರೂ.2200/- | | |
| **Convocation Fees Details** | | | | |
| ಸ್ನಾತಕೋತ್ತರ ಪದವಿ | | ಸಾಮಾನ್ಯ | ಪ.ಜಾ/ಪ.ಪಂ/ಪ್ರವರ್ಗ-1(ರೂ) | |
| | | ರೂ.1232/- | ರೂ.770/- | |

* <u>ಮೇಲ್ಕಂಡ ಘಟಿಕೋತ್ಸವ ಶುಲ್ಕ **Online** ಮುಖಾಂತರ ಪಾವತಿಸಿ ಮಾಹಿತಿಯನ್ನು ಕುಲಸಚಿವರು(ಪರೀಕ್ಷಾಂಗ) ಇವರಿಗೆ ನೀಡಬೇಕು.</u>

**::ವಿದ್ಯಾರ್ಥಿಗಳಿಗೆ ಸೂಚನೆ::**

- ವಿದ್ಯಾರ್ಥಿಗಳು Online ಮುಖಾಂತರ ಅರ್ಜಿ ಸಲ್ಲಿಸಲು studentportal.universitysolutions.in ನಲ್ಲಿ login ಆಗಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬೇಕು.
- ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿ ಮಾಡುವುದಕ್ಕೆ ಮುಂಚಿತವಾಗಿ ಎಲ್ಲಾ ಮಾಹಿತಿಗಳ ನಿಖರತೆಯನ್ನು ಖಾತರಿಪಡಿಸಿಕೊಳ್ಳಬೇಕು.
- ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಯನ್ನು ಪ್ರಥಮ ಅವಕಾಶದಲ್ಲಿ ಬರೆಯುತ್ತಿದ್ದರೆ. ಅಂತಹ ಸಂದರ್ಭದಲ್ಲಿ ಎಲ್ಲಾ ವಿಷಯಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳುವುದು.
- ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಯನ್ನು ಮರು ಅವಕಾಶದಲ್ಲಿ ಬರೆಯುತ್ತಿದ್ದರೆ, ಅಂತಹ ಸಂದರ್ಭದಲ್ಲಿ ವಿಷಯಗಳ ಆಯ್ಕೆಯು ವಿದ್ಯಾರ್ಥಿಗೆ ಇರುವುದಿಲ್ಲ.
- ವಿದ್ಯಾರ್ಥಿಗಳು ಪ್ರವೇಶ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಪರೀಕ್ಷೆ ಬರೆಯಬೇಕಾದ ವಿಷಯಗಳನ್ನು ಖಚಿತ ಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕವನ್ನು ಪಾವತಿ ಮಾಡುವ ವಿಧಾನ.
- **ವಿದ್ಯಾರ್ಥಿಯು Web Portal ಮುಖಾಂತರ Payment Gateway ಸೌಲಭ್ಯವನ್ನು ಬಳಸಿಕೊಂಡು (Debit Card / Credit Card / Net Banking / Wallet, ಇತ್ಯಾದಿ) ಹಣ ಪಾವತಿಸಬಹುದು. ಈ ವಿಧಾನದಲ್ಲಿ ಸೇವಾ ಶುಲ್ಕವಿರುತ್ತದೆ.**
- ವಿದ್ಯಾರ್ಥಿಗಳು ತಮ್ಮ Web Portal ನಿಂದ ಪರೀಕ್ಷಾ ಪ್ರವೇಶ ಪತ್ರಿಕೆಯನ್ನು ಸ್ವತಃ ಪಡೆಯಬಹುದು.
- ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಶೈಕ್ಷಣಿಕ ಅವಧಿ ಮುಗಿಯುವರೆಗೂ ತರಗತಿಗಳಿಗೆ ಹಾಜರಾಗಿ ನಿಯಮಾನುಸಾರ ಹಾಜರಾತಿ ಗಳಿಸುವುದು ಕಡ್ಡಯವಾಗಿರುತ್ತದೆ. ಇಲ್ಲವಾದಲ್ಲಿ ಪರೀಕ್ಷೆ ಬರೆಯಲು ಅನರ್ಹರು.

**<u>ವಿಶೇಷ ಸೂಚನೆ:</u> ವಿದ್ಯಾರ್ಥಿಗಳು Internet Browsing centerನ ಮಾಲೀಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸುವ ಸಂದರ್ಭದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು ಹಾಗೂ ಎರಡು ಬಾರಿ ಶುಲ್ಕ ಪಾವತಿಸಿದ್ದಲ್ಲಿ ಮಾರುಪಾವತಿಗೆ(No Refund) ಅವಕಾಶ ಇರುವುದಿಲ್ಲ.**

ಪರೀಕ್ಷಾ ಶುಲ್ಕಗಳ ಜೊತೆಗೆ ಅಂಕಪಟ್ಟಿ ಶುಲ್ಕ ರೂ.165/-ನ್ನು ಪ್ರತಿ ಸೆಮಿಸ್ಟರ್‌ಗೆ ಪ್ರತ್ಯೇಕವಾಗಿ ಪಾವತಿಸಬೇಕು.(ಅರ್ಜಿ ಶುಲ್ಕ ಪಾವತಿಸಬೇಕಾಗಿಲ್ಲ)

- **ರೂ.2,50,000 ಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ Fresherss ವಿದ್ಯಾರ್ಥಿಗಳಿಗೆ (ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ) ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ. ಇಂತಹ ಅಭ್ಯರ್ಥಿಗಳು ಅಂಕಪಟ್ಟಿ ಶುಲ್ಕ ರೂ.165/- (ಒಂದು ನೂರ ಅರವತ್ತೈದು ಮಾತ್ರ) ನ್ನು ಮಾತ್ರ ಪಾವತಿಸಬೇಕು.**

- ರೂ.2,50,000 ಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಪ್ರವರ್ಗ–1ರ Freshers ವಿದ್ಯಾರ್ಥಿಗಳು ಹಾಗೂ ರೂ.1,00,000/–ಕ್ಕಿಂತ ಕಡಿಮೆ ಆದಾಯ ಹೊಂದಿರುವ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು 2ಎ,3ಎ,3ಬಿ ಸೇರಿದ Freshers ವಿದ್ಯಾರ್ಥಿಗಳಿಗೆ ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ. ಆದರೆ ಅಂತಹ ವಿದ್ಯಾರ್ಥಿಗಳು ಹಿಂದಿನ ಸೆಮಿಸ್ಟರ್/ವರ್ಷದಲ್ಲಿ ಎಲ್ಲಾ ವಿಷಯಗಳಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು. ಆಗ ಅಂಕಪಟ್ಟಿ ಶುಲ್ಕ ರೂ.165/– (ಒಂದು ನೂರ ಅರವತ್ತೈದು ಮಾತ್ರ)ನ್ನು ಮಾತ್ರ ಪಾವತಿಸಬೇಕು. ಮಾಹಿತಿಗಾಗಿ ಸರ್ಕಾರಿ ಆದೇಶದ ಪ್ರತಿಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಿದೆ. ಫೇಲಾದ ಸೆಮಿಸ್ಟರ್‌ನ ಪತ್ರಿಕೆಗಳಿಗೆ ಶುಲ್ಕ ವಿನಾಯ್ತಿ ಇರುವುದಿಲ್ಲ. ನಿಗದಿತ ಶುಲ್ಕ ಪಾವತಿಸಬೇಕು.
- ಪ್ರವರ್ಗ–2B ಗೆ ಸೇರಿದ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇರುವುದಿಲ್ಲ ಈ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಲೇಬೇಕು. ಕಾರಣ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ:ಎಂಡಬ್ಲ್ಯುಡಿ:400:ಎಂಡಿಎಸ್–2014 ದಿನಾಂಕ:17–10–2014ಇಲಾಖೆ, ಬೆಂಗಳೂರು. ಈ ಆದೇಶದಲ್ಲಿ ಶುಲ್ಕ ವಿನಾಯಿತಿಯನ್ನು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ.
- ಹಿಂದಿನ ಸೆಮಿಸ್ಟರ್‌ನಲ್ಲಿ ಅನುತ್ತೀರ್ಣವಾದ SC/ST ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ Categary ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪ್ರತಿ ಸೆಮಿಸ್ಟರನಲ್ಲಿ ಪಾವತಿಸಬೇಕು. (ಫೇಲಾದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಗೆ ಅವಕಾಶ ಇರುವುದಿಲ್ಲಾ)

## ಮುಖ್ಯಸ್ಥರು/ನಿರ್ದೇಶಕರು/ಸಂಯೋಜನಾಧಿಕಾರಿಗಳು/ಪ್ರಾಚಾರ್ಯರಿಗೆ ಸೂಚನೆ:–

- ಮುಖ್ಯಸ್ಥರು/ನಿರ್ದೇಶಕರು/ಸಂಯೋಜನಾಧಿಕಾರಿಗಳು/ಕಾಲೇಜಿನ ಪ್ರಾಂಶುಪಾಲರು ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು Web Portal ಮುಖಾಂತರ ಮಾಡಬೇಕು.
- ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ ನೊಂದಣಿ ಸಂಖ್ಯೆ (Register No.) ಹಾಗೂ ಗುರುತಿನ ಸಂಖ್ಯೆ (Student ID) ತಯಾರು ಮಾಡಿ ಕಾಲೇಜುಗಳಿಗೆ ಅಂತರ್ಜಾಲದ ಮುಖಾಂತರ ಕಳುಹಿಸುವುದು.
- ಮುಖ್ಯಸ್ಥರು/ನಿರ್ದೇಶಕರು/ಸಂಯೋಜನಾಧಿಕಾರಿಗಳು/ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಕಟ್ಟುವುದಕ್ಕಿಂತ ಮುಂಚಿತವಾಗಿ ಶೈಕ್ಷಣಿಕವಾಗಿ ಅರ್ಹತೆಗಳು ಹೊಂದಿದ್ದಾರೆ ಎಂದು ಖಚಿತ ಪಡಿಸಿಕೊಳ್ಳಬೇಕು.
- ಮುಖ್ಯಸ್ಥರು/ನಿರ್ದೇಶಕರು/ಸಂಯೋಜನಾಧಿಕಾರಿಗಳು/ಕಾಲೇಜಿನ ಪ್ರಾಂಶುಪಾಲರು Web Portal ಮುಖಾಂತರ ವಿದ್ಯಾರ್ಥಿಗಳ ಪರೀಕ್ಷೆ ಅರ್ಹತೆಯನ್ನು ಹಾಗೂ ಶುಲ್ಕದ ರಿಯಾಯಿತಿಯನ್ನು ದೃಢೀಕರಿಸಬೇಕು.
- ವಿಭಾಗದ/ಕಾಲೇಜು ದೃಢೀಕರಿಸಿದ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ Web Portal ಮುಖಾಂತರ ತಿಳಿಸಲಾಗುವುದು.
- ಅವಶ್ಯವಿದ್ದ ಸಂದರ್ಭದಲ್ಲಿಮಾತ್ರ ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರವನ್ನು ವಿಶ್ವವಿದ್ಯಾನಿಲಯದ ನಿರ್ದೇಶನುಸಾರ ಕಾಲೇಜುಗಳಲ್ಲಿ ಮುದ್ರಿಸಿ ಒದಗಿಸತಕ್ಕದ್ದು.
- ವಿಶ್ವವಿದ್ಯಾನಿಲಯವು ಕಾಲೇಜುಗಳಿಗೆ ಒದಗಿಸುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಯನ್ನು Web Portal ಮುಖಾಂತರ ತಿಳಿಸುವುದು.ಕಾಲೇಜುಗಳು ಇದನ್ನು ಪರಿಶೀಲಿಸಿ ಯಾವುದಾದರು ವ್ಯತ್ಯಯವಿದ್ದರೆ ಅದನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತರುವುದು.
- Invigilator Dairy ಯನ್ನು (02 ಪ್ರತಿಗಳು) ಆನ್‌ಲೈನ್ ಮೂಲಕವೇ ಸಿದ್ಧಪಡಿಸಿಕೊಳ್ಳಬೇಕು ಹಾಗೂ ಆಯಾ ದಿನದ ಉತ್ತರ ಪತ್ರಿಕೆ ಬಂಡಲ್ ಗಳ ಜೊತೆಯಲ್ಲಿಯೇ 01 ಪ್ರತಿಯನ್ನು ಕಳುಹಿಸಿಕೊಡುವುದು.
- ಪರೀಕ್ಷೆಗೆ ಗೈರುಹಾಜರಾದ ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ ಮತ್ತು ವಿಷಯವನ್ನು (QP Code) ಆನ್ ಲೈನ್ ಮೂಲಕವೇ ನಮೂದಿಸುವುದು.
- ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕ/ಇತರೆ ಶುಲ್ಕಗಳ ಮರುಭರಿಕೆಗೆ ಸಂಬಂಧಿಸಿದಂತೆ, **ಸರ್ಕಾರಿ ಆದೇಶ ಸಂಖ್ಯೆ:ಹಿವಿಕ:589: ಬಿಎಂಎಸ್:2013:ಇಲಾಖೆ,ಬೆಂಗಳೂರು.ಇವರದಿನಾಂಕ:05–10–2013ರಪ್ರಕಾರ** ವಿದ್ಯಾರ್ಥಿಗಳಿಗೆ ಶುಲ್ಕ ಮರುಭರಿಕೆಗೆ ಕ್ರಮ ಕೈಗೊಳ್ಳತಕ್ಕದ್ದು.
- ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕ/ ಇತರ ಶುಲ್ಕಗಳ ಮರುಭರಿಕೆಗೆ ಸಂಬಂಧಿಸಿದಂತೆ, ಆಯುಕ್ತರ ಕಛೇರಿ ಹಿಂದುಳಿದ ವರ್ಗಗಳಕ ಲ್ಯಾಣ ಇಲಾಖೆ, ಬೆಂಗಳೂರು.ಇವರ ಸಂಖ್ಯೆ:ಹಿಂವಕಇ/ಶುವಿ/ಸಿ.ಆರ್–34:2014–15ದಿನಾಂಕ:19–09–2014ರ ಪ್ರಕಾರ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಶುಲ್ಕ ಮರುಭರಿಕೆ ಹಣವನ್ನು ಪ್ರಾಚಾರ್ಯರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ. ಆದ್ದರಿಂದ ಶುಲ್ಕ ಮರುಭರಿಕೆಯಾದ ನಂತರ ಸದರಿ ಮೊತ್ತವನ್ನು ದಾವಣಗೆರೆ ವಿಶ್ವವಿದ್ಯಾನಿಲಯ ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳತ್ತಕ್ಕದ್ದು.
- **ಪರೀಕ್ಷಾ ಶುಲ್ಕ ವಿನಾಯ್ತಿ ಪಡೆದ (ಪ್ರವರ್ಗ–1,2ಎ,3ಎ,3ಬಿ), ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಪಟ್ಟಿಯನ್ನು Web Portal ಮುಖಾಂತರ ಸಿದ್ಧಪಡಿಸಿ ಈ ಕಛೇರಿಗೆ ಸಲ್ಲಿಸತ್ತಕ್ಕದ್ದು.**
- ನಿಯಮಾನುಸಾರ ವಿಶ್ವವಿದ್ಯಾನಿಲಯವು ಅನುಮೋದನೆ ನೀಡಿರುವ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಸಂಗ್ರಹಿಸಬೇಕು.
- **ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ** ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪ್ರಾಚಾರ್ಯರು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ವಿದ್ಯಾರ್ಥಿ ವೇತನದಲ್ಲಿ ಕಡ್ಡಾಯವಾಗಿ ಕಟಾಯಿಸಿ ಎಲ್ಲಾ ವಿವರಗಳೊಂದಿಗೆ ವಿಶ್ವವಿದ್ಯಾನಿಲಯದ ನಿಧಿಗೆ Payment Gateway ಮುಖಾಂತರ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕು.
- ಮುದ್ರಿತ ನಮೂನೆಗಳು (ಸೈದ್ಧಾಂತಿಕ/ಪ್ರಾಯೋಗಿಕ) ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯನ್ನು ಸಹ ದಿನಾಂಕ:05–06–2020 ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.

- <u>ಆಂತರಿಕ ಅಂಕಗಳ ಮಾರ್ಕ್ಸ್ ಲೀಸ್ಟ್‌ಗಳನ್ನು ಕಡ್ಡಾಯವಾಗಿ ಸಮರ್ಪಕವಾಗಿ ಪರಿಶೀಲಿಸಿ 10.06.2020 ರಿಂದ 19.06.2020 ಮುಂಚೆಯೇ Online ಮುಖಾಂತರ ಸಲ್ಲಿಸಬೇಕು. ಫಲಿತಾಂಶ ನೀಡಿದ ನಂತರ ಯಾವುದೇ ತಿದ್ದುಪಡಿ/ ಮಾರ್ಪಾಡುಗಳಿಗೆ ಅವಕಾಶ ಇರುವುದಿಲ್ಲ.</u>
- ಪರೀಕ್ಷಾ ಫೀ ಪಾವತಿಸದೇ ಇರುವ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯಲು ಅನುಮತಿಸಿ ನಂತರದಲ್ಲಿ ಫಲಿತಾಂಶ ಬಾರದ ಬಗ್ಗೆ ದೂರು ನೀಡುವುದನ್ನು ಗಮನಿಸಲಾಗಿದೆ. ಈ ಬಾರಿ ಇಂತಹ ಪ್ರಕರಣಗಳು ಬಾರದಂತೆ ಎಚ್ಚರವಹಿಸಬೇಕು. ಕಾರಣ, ಒಮ್ಮೆ ಪರೀಕ್ಷೆ ಬರೆಸಿದಲ್ಲಿ ಅಭ್ಯರ್ಥಿ ಪಟ್ಟಿಯಲ್ಲಿ ಹೆಸರು ಇಲ್ಲದವರ ಫಲಿತಾಂಶ ನೀಡಲು ಅವಕಾಶವಿರದಂತೆ ಸಾಫ್ಟ್‌ವೇರ್‌ನಲ್ಲಿ ಮಾರ್ಪಾಡು ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಇದನ್ನು ತಿಳಿಸುವುದು.
- ಪ್ರಸ್ತುತ ಸಾಲಿನಲ್ಲಿ ಪ್ರವೇಶ ಪಡೆದು ಶೈಕ್ಷಣಿಕ ವಿಭಾಗದಿಂದ ಅನುಮೋದನೆಗೊಂಡ ವಿದ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರು ಪಡಿಸುವ ಹೊಣೆಯು ಕಾಲೇಜಿನ ಪ್ರಾಂಶುಪಾಲರದ್ದಾಗಿರುತ್ತದೆ. ತಪ್ಪಿದಲ್ಲಿ ತಮ್ಮನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.
- ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳ ಪಟ್ಟಿಯನ್ನು (Absentee Statement) ಪ್ರತ್ಯೇಕವಾಗಿ ಆಯಾ ದಿನದಂದೇ ವಿಶ್ವ ವಿದ್ಯಾನಿಲಯಕ್ಕೆ ಕಳುಹಿಸಬೇಕು.

| |
|---|
| 1) <u>ನವೆಂಬರ್ 2016ರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ **Double the Duration** ಪ್ರಕಾರ ಜುಲೈ/ಆಗಸ್ಟ್ 2020ರ ಪರೀಕ್ಷೆ ಕಡೆಯ ಪರೀಕ್ಷೆಯಾಗಿದ್ದು ಡಿಸೆಂಬರ್ 2020ರಿಂದ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.</u><br>2) ನಿಯಮಾನುಸರ ಪರೀಕ್ಷ ಶುಲ್ಕ ವಿನಾಯ್ತಿ ಪಡೆದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಸರ್ಕಾರದಿಂದ ಮಂಜೂರಾದ ಹಣವನ್ನು ಕೂಡಲೇ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡದಿರುವುದು ಕಂಡುಬಂದಿರುತ್ತದೆ. ಮಂಜೂರಾದ ಹಣವನ್ನು ವಿವಿಗೆ ಪಾವತಿಸದೇ ಕಾಲೇಜಿನಲ್ಲಿಯೇ ಉಳಿಸಿಕೊಂಡಲ್ಲಿ ಇಂತಹ ಪ್ರಕರಣಗಳನ್ನು ಗಂಭೀರವೆಂದು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

**ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 6363341215, 6363337901 ಹಾಗೂ 6363351762 ಸಂಪರ್ಕಿಸಬಹುದು.**

ಕುಲಸಚಿವರು (ಪರೀಕ್ಷಾಂಗ)

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577002.

ಗೆ,

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ/ವಿಭಾಗ/ಕಾಲೇಜುಗಳ ಪ್ರಾಚಾರ್ಯರುಗಳಿಗೆ.

ಪ್ರತಿ:

1. ಸಮಾಜ ಕಲ್ಯಾಣ ಅಧಿಕಾರಿಗಳು, ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
2. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
3. ಆಪ್ತಶಾಖೆ, ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಉಪಕುಲಸಚಿವರು (ಪರೀಕ್ಷಾಂಗ), ಉಪಕುಲಸಚಿವರು(ಆಡಳಿತ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಅಧೀಕ್ಷಕರು, ವಿಷಯ ನಿರ್ವಾಹಕರುಗಳು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಪ್ರಾದೇಶಿಕ ಮುಖ್ಯಸ್ಥರು, ಲಾಜಿಸಿಸ್, ದಾವಣಗೆರೆ.
7. ಕಛೇರಿ ಪ್ರತಿ.